ದಿನಾಂಕ 03.09.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರಿ. ಆರ್.ಎಸ್. ವಕೀಲರಿಂದಃ**

ನಾನು ಒಂದು ಟೆಂಪೋ, ಒಂದು ಆಟೋ, ಒಂದು ಟಿಲ್ಲರ್ ಹಾಗೂ ಒಂದು ಹೀರೋ ಹೊಂಡಾ ಬೈಕ್‌ನ್ನು ಖರೀದಿಸಿದ್ದೇನೆ ಎಂದರೆ ಸರಿ. ನನ್ನ ತಂದೆ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸುವ ಸುಮಾರು 2-3 ತಿಂಗಳ ಹಿಂದೆ ಕೊರಟಗೆರೆ ತಾಲ್ಲೋಕಿನ ನರಸೀಪುರ ಗ್ರಾಮದಲ್ಲಿ ನಡೆದ ವಾದಿಯ ಮೊಮ್ಮಗಳ ನಾಮಕರಣ ಸಮಾರಂಭದಲ್ಲಿ ಭಾಗವಹಿಸಿದ್ದರು ಎಂದರೆ ಸರಿ. ದಿಃ29.05.2019 ರಂದು ನನ್ನ ತಂದೆ ಭೀಮಸಂದ್ರದಲ್ಲಿ ನಡೆದ ಮದುವೆ ಸಮಾರಂಭದಲ್ಲಿ ಭಾಗವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ05.06.2019 ರಂದು ನನ್ನ ತಂದೆ ದಾಬಸ್‌ಪೇಟೆ ಬಳಿಯ ಲಕ್ಕೂರು ಗ್ರಾಮದ ನಾಗರಾಜಪ್ಪನವರ ಮನೆಗೆ ಊರ ಹಬ್ಬದ ಸಲುವಾಗಿ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಸಮಾರಾಂಭಗಳಿಗೆ ನನ್ನ ತಂದೆಯನ್ನು ನಾನೇ ಕರೆದುಕೊಂಡು ಹೋಗಿದ್ದೇ ಎಂದರೆ ಸರಿಯಲ್ಲ. ನನ್ನ ತಂದೆ ದಿಃ08.05.2019 ರಂದು ನಡೆದ ವಿ.ಎಸ್.ಎಸ್.ಎನ್ ಚುನಾವಣೆಗೆ ಮತ ಚಲಾಯಿಸಲು ಹೋಗಿದ್ದರು ಎಂದರೆ ಸರಿ. ಈಗ ತೋರಿಸಿದ 4 ಹಕ್ಕು ಪತ್ರಗಳು, ಆಶ್ರಯ ಯೋಜನೆಯಡಿ ನಿವೇಶನ ಮಂಜೂರು ಮಾಡಿ, ತಿಮ್ಮಪ್ಪ, ಈರಣ್ಣ, ಸಿದ್ದಪ್ಪ ಮತ್ತು ರಂಗಯ್ಯನವರಿಗೆ ನೀಡಲಾಗಿದೆ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ಒಪ್ಪಿರುತ್ತಾರೆ. ಸದರಿ ದಾಖಲೆಗಳನ್ನು ನಿ.ಡಿ.1 ರಿಂದ 4 ಎಂದು ಗುರುತಿಸಲಾಗಿದೆ. ಹಕ್ಕು ಪತ್ರಗಳನ್ನು ಪಡೆದುಕೊಳ್ಳುವ ಕಾಲಕ್ಕೆ ರುಜು ಮಾಡಿ ಪಡೆದಿರುತ್ತಾರೆ ಎಂದರೆ ಸರಿ. ನಿ.ಡಿ.1 ರಿಂದ 4 ರ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

2. ನನ್ನ ತಂದೆ ಹಾಗೂ ಪ್ರತಿವಾದಿಗಳು ಕುಟುಂಬದ ಸ್ವತ್ತುಗಳನ್ನು ದಿಃ13.07.1990 ರಂದು ಪಂಚಾಯಿತಿ ಪಾರಿಕತ್ತಿನ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ಸರ್ವೆ ನಂಬರ್ 32/14 ರಲ್ಲಿ 15 ಗುಂಟೆ ನಮ್ಮ ಪ್ರತ್ಯೇಕ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 32/14 ರಲ್ಲಿನ ಬಾವಿಯ ಹಕ್ಕಿನಲ್ಲಿ 1 ಆಣೆ ಹಿಸ್ಸೆ ನನ್ನ ತಂದೆಗೆ ಬಂದಿದೆ ಎಂದರೆ ಸರಿಯಲ್ಲ. ವಿಭಾಗದಲ್ಲಿ 2 ಹೊಂಗೆ ಮರ, ಒಂದು ನೇರಳೆ ಮರ ನನ್ನ

ತಂದೆಯ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಸದರಿ ಮರಗಳನ್ನು ನನ್ನ ತಂದೆ ಮತ್ತು 2ನೇ ಪ್ರತಿವಾದಿ ಸುಮಾರು 6-7 ವರ್ಷಗಳ ಹಿಂದೆ ಜುಂಜಾರಮನಹಳ್ಳಿಯ ರಂಗನಾಥಪ್ಪನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

3. ಯಲಿಯೂರು ಕೆರೆ ಹತ್ತಿರದಲ್ಲಿ ನಮಗೆ ಸೇರಿದ ಒಂದು ಮನೆ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ನಾವು ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಸದರಿ ಮನೆ ದಾವಾ ಆಸ್ತಿಯಲ್ಲ ಎಂದರೆ ಸರಿ. ಸರ್ವೆ ನಂಬರ್ 32/14 ರಲ್ಲಿ ಉಳಿದ ಉತ್ತರದ ಕಡೆಯ 15 ಗುಂಟೆ 2ನೇ ಪ್ರತಿವಾದಿಯ ಹಿಸ್ಸೆಗೆ ಬಂದಿದೆ ಎಂದರೆ ಸರಿಯಲ್ಲ. ದಾರಿ ಮತ್ತು ಕಾಲುವೆ ಹಕ್ಕನ್ನು ಇಬ್ಬರಿಗೂ ನೀಡಲಾಗಿದೆ ಎಂದರೆ ಎಲ್ಲರಿಗೂ ಹಕ್ಕು ಇದೆ ಎನ್ನುತ್ತಾರೆ. ಸದರಿ ಕಾಲುವೆಯಿಂದಲೇ ನಮ್ಮ ನಮ್ಮ ಹಿಸ್ಸೆಗಳಿಗೆ ನೀರು ಹಾಯಿಸಿಕೊಳ್ಳುತ್ತೇವೆ ಎಂದರೆ ಎಲ್ಲಾ ಅಣ್ಣ-ತಮ್ಮಂದಿರು ನೀರು ಹಾಯಿಸಿಕೊಳ್ಳುತ್ತಾರೆ.

4. ಯಲಿಯೂರು ಗ್ರಾಮದ ನಿವೇಶನ ಸಂಖ್ಯೆ 137 ರಲ್ಲಿ ಅರ್ಧ ಭಾಗ 2ನೇ ಪ್ರತಿವಾದಿಯ ಹಿಸ್ಸೆಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 76/3 ರಲ್ಲಿ ಕಳ್ಳಂಬೆಳ್ಳ ಕೆರೆ ಆಸರೆ 22 ಗುಂಟೆ ಹಾಗೂ 7 ಗುಂಟೆ ಜಮೀನು 3ನೇ ಪ್ರತಿವಾದಿಯ ಹಿಸ್ಸೆಗೆ ಬಂದಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 277/1 ರಲ್ಲಿ 23 ಗುಂಟೆ ತಂದೆ-ತಾಯಿಗಳ ಜೀವನಾಂಶಕ್ಕೆ ನೀಡಿದ್ದು, ಅವರ ಪವತಿ ನಂತರ 3ನೇ ಪ್ರತಿವಾದಿ ಅನುಭವಿಕೊಂಡು ಹೋಗಲು ಪಾರಿಕತ್ತಿನಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 54 ರಲ್ಲಿ 30 ಗುಂಟೆ 5ನೇ ಪ್ರತಿವಾದಿ ಮತ್ತು ಬಸವಯ್ಯನವರ ಹಿಸ್ಸೆಗೆ ನೀಡಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 81/3 ರ ಮನೆಯು ನನ್ನ ಅಜ್ಜ-ಅಜ್ಜಿ ಪವತಿ ನಂತರ 5ನೇ ಪ್ರತಿವಾದಿ ಮತ್ತು ಬಸವಯ್ಯನವರ ಹಿಸ್ಸೆಗೆ ನೀಡಲಾಗಿದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.